ಇಲ್ಲದಿರುವ ಸಂಗತಿ ಸರ್ಕಾರದ ಗಮನಕ್ಕೆ ಒಂದಿದೆಯೇ?

2 ಈ ಒಳಚರಂಡಿ ಯೋಜನೆಗೆ ಎಷ್ಟು ಹಣ ಬೇಕಾಗುವುದು

3 ಈ ಯೋಜನೆಗೆ ನಬಾರ್ಡ್ ಅಥವಾ ಬೇರೆ ಯಾವುದೇ ಯೋಜನೆಯಡಿಯಲ್ಲಿ (ಉಳಿದ ನಗರ ಸಭೆಗಳಿಗೆ ಮಾಡಿದಂತೆ) ಸಾಲವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉತ್ತರ

1 ಬಂದಿದೆ

2 ಅಂದಾಜು ರೂ 589 00 ಲಕ್ಷಗಳು ಬೇಕಾಗಬಹುದು (1997-98ನೇ ಸಾಲಿನ ದರಗಳ ಪಟ್ಟಿಯ ಮೇಲೆ)

3 ನಬಾರ್ಡ್‌ನಿಂದ ಈ ತರಹದ ಯೋಜನೆಗಳಿಗೆ ಸದ್ಯಕ್ಕೆ ಸಾಲ ಸೌಲಭ್ಯ ದೊರಕುತ್ತಿಲ್ಲ

ಬೈಲಹೊಂಗಲ ನಗರದಲ್ಲಿ ಮಲಪ್ರಭಾ ನದಿಯಿಂದ 2ನೇ ಹಂತದ ಕುಡಿಯುವ ನೀರಿನ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 100(342)

ಸದಸ್ಯರ ಹೆಸರು ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಯವರು)

ಪ್ರಶ್ನೆ

1 ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದ ವಿಸ್ತರಣೆ ಪ್ರದೇಶದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

2 ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಮಲಪ್ರಭಾ ನದಿಯಿಂದ 2ನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ

3 ಇದಕ್ಕೆ ಅವಶ್ಯವಿರುವ ಹಣವನ್ನು ನಬಾರ್ಡ್ ಯೋಜನೆಯಡಿಯಲ್ಲಿ

ಸಾಲರೂಪವಾಗಿ (ಉಳಿದ ನಗರ ಸಭೆಗಳಿಗೆ ಒದಗಿಸಿದಂತೆ) ಬೈಲಹೊಂಗಲ ಪುರಸಭೆಗೆ ಒದಗಿಸಲು ಸರ್ಕಾರ ಸಹಾಯ ಮಾಡುವುದೇ

ಉತ್ತರ

1 ಬಂದಿಲ್ಲ

2 ಸದ್ಯಕ್ಕೆ ಅಂತಹ ಪ್ರಸ್ತಾವನೆಯು ಇರುವುದಿಲ್ಲ

3 ಉದ್ಭವಿಸುವುದಿಲ್ಲ

ಪಟ್ಟಣ ಪಂಚಾಯಿತಿಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 101(399)

ಸದಸ್ಯರ ಹೆಸರು ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಪಟ್ಟಣ ಪಂಚಾಯತಿಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯವೇನು?

ಆ) ರಸ್ತೆ ಒಳಚರಂಡಿ, ಬೀದಿದೀಪ ಇತ್ಯಾದಿ ಸೌಕರ್ಯಗಳನ್ನು ಸರ್ಕಾರ ಒದಗಿಸಬಹುದೆ?

ಇ) ತೆರಿಗೆಯನ್ನು ವಸೂಲಿ ಮಾಡಿ ಕಾರ್ಯಭಾರ ಮಾಡಲಾಗುವುದೆ?

ಈ) ಕೆಲಸಗಾರರಿಗೆ ಸಂಬಳ ಎಲ್ಲಿಂದ ಕೊಡಲಾಗುವುದು?

ಉತ್ತರ

ಅ) ಎನ್ ಎಫ್ ಸಿ ಹತ್ತನೇ ಹಣಕಾಸು ಆಯೋಗ ಮುಂತಾದ ಯೋಜನೆಗಳ ಅಡಿಯಲ್ಲಿ ಅನುದಾನ ನೀಡಲಾಗುತ್ತಿದೆ

ಆ) ಅವಕಾಶವಿರುವುದಿಲ್ಲ